ಶಿಶು ಮರಣ ಕಡಿಮೆ ಮಾಡುವುದು, ಔಪಚಾರಿಕ ಶಿಕ್ಷಣಕ್ಕೆ ಮಕ್ಕಳನ್ನು ಸಿದ್ಧಗೊಳಿಸುವುದು, ಮಗುವಿನ ಸರ್ವತೋನ್ಮುಖ ಬೆಳವಣಿಗೆಗೆ ಭದ್ರ ಅಡಿಪಾಯ ಹಾಕುವ ನಿಟ್ಟಿನಲ್ಲಿ ಕ್ರಮವಹಿಸಲಾಗುತ್ತಿದೆ ಏಪ್ರಿಲ್ 2006ರಿಂದ ಫೆಬ್ರವರಿ 2007 ಅಂತ್ಯದವರೆವಿಗೆ ಬಿ ಪಿ ಎಲ್ ಕುಟುಂಬದಲ್ಲಿ ಒಟ್ಟು 276718 ಮಕ್ಕಳಿರುತ್ತಾರೆ ಭಾಗ್ಯಲಕ್ಷ್ಮಿ ಯೋಜನೆಯಡಿ 1/4/2006ರಿಂದ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ಜನಿಸಿದ 119209 ಹೆಣ್ಣು ಮಕ್ಕಳನ್ನು ಗುರುತಿಸಿದ್ದು, ಈ ಮಕ್ಕಳ ಹೆಸರಿನಲ್ಲಿ ಪಾಲುದಾರು ಹಣಕಾಸು ಸಂಸ್ಥೆಯಲ್ಲಿ ರೂ 10,000ಗಳ ಠೇವಣಿ ಹೂಡಲಾಗುವುದು 18ವರ್ಷಗಳು ಪೂರೈಸಿದ ನಂತರ ಬಡ್ಡಿ ಸಮೇತ ಹೆಣ್ಣು ಮಗುವಿಗೆ ನೀಡಲಾಗುವುದು

ಶಿಶು ಪಾಲನಾ ಕೇಂದ್ರಗಳಲ್ಲಿ 0–3ವರ್ಷದ ಮಕ್ಕಳನ್ನು ತಾಯಂದಿರು ಕೆಲಸಕ್ಕೆ ಹೋಗಿರುವ ಸಮಯದಲ್ಲಿ ಪಾಲನೆ ಮಾಡಲಾಗುತ್ತದೆ

ನಿರ್ಗತಿಕ ಮಕ್ಕಳ ಕುಟೀರಗಳಲ್ಲಿ ಮಕ್ಕಳನ್ನು ದಾಖಲುಮಾಡಿ ಅವರ ರಕ್ಷಣೆ, ಪೋಷಣೆ, ವಿದ್ಯಾಭ್ಯಾಸ, ಆಹಾರ ಮತ್ತು ತರಬೇತಿ ನೀಡಲಾಗುತ್ತಿದೆ

ಇ) ಅಲ್ಪ ವಯಸ್ಸಿನ ದುಡಿಯುವ ಮಕ್ಕಳಿಗೆ ಸರ್ಕಾರ ಪುನರ್‌ವಸತಿ ಕಲ್ಪಿಸಿದೆಯೇ (ವಿವರ ನೀಡುವುದು)?

ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರಾಗುವ ಮಕ್ಕಳ ತಂದೆ–ತಾಯಿ/ಪೋಷಕರನ್ನು ಪತ್ತೆ ಹಚ್ಚಿ ಅವರ ವಶಕ್ಕೆ ಬಿಡಲಾಗುತ್ತದೆ ಪೋಷಕರು ಪತ್ತೆಯಾಗದ ಸಂದರ್ಭಗಳಲ್ಲಿ ಮಕ್ಕಳನ್ನು ಬಾಲಮಂದಿರಗಳಲ್ಲಿ, ದಾಖಲುಗೊಳಿಸಲಾಗುತ್ತವೆ ರಕ್ಷಣೆ, ಪೋಷಣೆ, ಆಹಾರ, ವೈದ್ಯಕೀಯ ತಪಾಸಣೆ, ವಿದ್ಯಾಭ್ಯಾಸ ಹಾಗೂ ತರಬೇತಿಯನ್ನು ನೀಡಲಾಗುತ್ತದೆ

ಚುಕ್ಕೆ ಗುರುತಿಲ್ಲದ ಪ್ರಶ್ನ ಸಂಖ್ಯ	**1285(1772)**
ಸದಸ್ಯರ ಹೆಸರು	**ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ)**
ಉತ್ತರಿಸಬೇಕಾದ ಸಚಿವರು	**ಶ್ರೀ ಗೋವಿಂದ ಎಂ ಕಾರಜೋಳ (ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)**

ಅ) ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ಪ್ರಸ್ತುತ ವಿತರಿಸಲಾಗಿರುವ ವಿವಿಧ ವರ್ಗವಾರು ಪಡಿತರ ಕಾರ್ಡ್‌ಗಳೆಷ್ಟು (ತಾಲ್ಲೂಕುವಾರು ವಿವರ ಒದಗಿಸುವುದು),

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಸ್ತುತ ವಿತರಿಸಲಾಗಿರುವ ವಿವಿಧ ವರ್ಗವಾರು ತಾತ್ಕಾಲಿಕ ಕೂಪನ್‌ಗಳ ವಿವರ ಈ ಕೆಳಕಂಡಂತಿದೆ –

ತಾಲ್ಲೂಕಿನ ಹೆಸರು	ಅನ್ನಪೂರ್ಣ	ಅಂತ್ಯೋದಯ	ಅಕ್ಷಯ (ಬಿಪಿಎಲ್)	ಎಪಿಎಲ್	ಒಟ್ಟು
ಮಂಗಳೂರು ಅಪ	109	327	16125	52293	68854
ಮಂಗಳೂರು	92	4678	33880	38668	77318
ಬಂಟ್ವಾಳ	46	3184	29856	34327	67413
ಪುತ್ತೂರು	40	2753	21428	24342	48563
ಬೆಳ್ತಂಗಡಿ	42	3057	21233	25306	49638
ಸುಳ್ಯ	23	1858	11283	15432	28596
ಒಟ್ಟು	352	15857	133805	190368	340382

ಆ) ಪಡಿತರ ಕಾರ್ಡ್‌ಗಳ ಹಂಚಿಕೆಯ ಪ್ರಕ್ರಿಯೆಯು ಯಾವ ಹಂತದಲ್ಲಿವೆ, ಅದನ್ನು ಯಾವಾಗ ಪೂರ್ಣಗೊಳಿಸಲಾಗುವುದು,

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮುದ್ರಿಸಿದ ತಾತ್ಕಾಲಿಕ ಗಣಕೀಕೃತ ಕೂಪನ್‌ಗಳ ಪೈಕಿ ಈವರೆಗೆ ಶೇಕಡಾ 92 6ರಷ್ಟು ಪಡಿತರ ಚೀಟಿಗಳನ್ನು ವಿತರಿಸಲಾಗಿದೆ

ರಾಜ್ಯದಲ್ಲಿ ತಾತ್ಕಾಲಿಕ ಪಡಿತರ ಚೀಟಿ ವಿತರಣೆಯಲ್ಲಿ ಹಲವು ರೀತಿಯ ಲೋಪದೋಷಗಳು ಅಂದರೆ ನ್ಯಾಯಬೆಲೆ ಅಂಗಡಿ ಬದಲಾವಣೆ, ಪಡಿತರ ಚೀಟಿಯಲ್ಲಿ ಹೊಸ ಕುಟುಂಬ ಸದಸ್ಯರ ಸೇರ್ಪಡೆ, ಪಡಿತರ ಚೀಟಿಯಲ್ಲಿ ಕುಟುಂಬ ಸದಸ್ಯರ ತೆಗೆದು ಹಾಕುವ ಬಗ್ಗೆ, ಕುಟುಂಬದ ಮುಖ್ಯಸ್ಥರ ಬದಲಾವಣೆ, ಇತರೇ ಯಾವುದೇ ರೀತಿಯ ಅಹವಾಲುಗಳು, ತಿದ್ದುಪಡಿಗಳು, ವರ್ಗ ಬದಲಾವಣೆ ಕೋರಿರುವ ಅಹವಾಲುಗಳು, ಹೊಸದಾಗಿ ಪಡಿತರ ಚೀಟಿ ಕೋರಿರುವ ಅಹವಾಲುಗಳು ವರದಿಯಾಗಿದ್ದು, ಈ ರೀತಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾರ್ವಜನಿಕರಿಂದ 231296 ಅಹವಾಲುಗಳನ್ನು ಸ್ವೀಕರಿಸಲಾಗಿರುತ್ತದೆ ಇದರಲ್ಲಿ 39495 ವರ್ಗ ಬದಲಾವಣೆಗಾಗಿ, 47115 ಹೊಸ ಪಡಿತರ ಚೀಟಿಗಾಗಿ, 95450 ಡೆಮೋ ಗ್ರಾಫಿಕ್ ಬದಲಾವಣೆಗಾಗಿ, 49236 ಇತರೆ ಅಹವಾಲುಗಳಿದ್ದು, ಅವುಗಳ ಪರಿಶೀಲನೆ ಕಾರ್ಯ ಮುಕ್ತಾಯವಾಗಿರುತ್ತದೆ ಖಾಯಂ ಪಡಿತರ ಚೀಟಿಯನ್ನು ವಿತರಿಸಲು ಕನಿಷ್ಟ 6 ತಿಂಗಳ ಕಾಲಾವಕಾಶ ಬೇಕಿರುತ್ತದೆ

ಇ) ವಿತರಿಸಲಾದ ಪಡಿತರ ಕಾರ್ಡ್‌ಗಳಲ್ಲಿ ಕಂಡು ಬರುವ ಹಲವಾರು ಲೋಪದೋಷಗಳನ್ನು ಸರಿಪಡಿಸುವ ಕುರಿತಾದ ಕ್ರಮಗಳೇನು?

ತಾತ್ಕಾಲಿಕ ಪಡಿತರ ಕೂಪನ್‌ನಲ್ಲಿ ಹೆಸರು, ಸಂಬಂಧ ಅಥವಾ ವಯಸ್ಸು ಇತ್ಯಾದಿ ಲೋಪದೋಷವಿದೆ ಎಂಬುದಾಗಿ ಸಾರ್ವಜನಿಕರು ಅಹವಾಲುಗಳನ್ನು ಸಲ್ಲಿಸಿರುತ್ತಾರೆ ಸಾರ್ವಜನಿಕರ ಅಹವಾಲುಗಳನ್ನು ನೊಂದಾಯಿಸಿಕೊಳ್ಳಲು ಪ್ರತಿ ತಾಲ್ಲೂಕು ಕೇಂದ್ರದಲ್ಲಿ ನೊಂದಣಿ ಕೇಂದ್ರವನ್ನು ತೆರೆದು 15 ದಿನಗಳ ಕಾಲ ಸದರಿ ನೊಂದಣಿ ಕೇಂದ್ರಗಳಲ್ಲಿ ಅಹವಾಲುಗಳು ನೊಂದಾಯಿಸಲಾಗಿರುತ್ತದೆ ಅವಧಿ ಮೀರಿ ಸಲ್ಲಿಸುವ ಅಹವಾಲುಗಳನ್ನು ಸ್ಥಳೀಯವಾಗಿ ಗ್ರಾಮ ಲೆಕ್ಕಾಧಿಕಾರಿ ಮತ್ತು ಗ್ರಾಮ ಪಂಚಾಯತ್ ಕಛೇರಿಗಳಲ್ಲಿಯೂ ಸಹ ಸ್ವೀಕರಿಸಲು ವ್ಯವಸ್ಥೆ ಮಾಡಲಾಗಿತ್ತು, ಅಹವಾಲುಗಳ ಪರಿಶೀಲನೆ ಕಾರ್ಯ ಮುಕ್ತಾಯವಾಗಿದೆ ಹಾಗೂ ವರ್ಗ ಬದಲಾವಣೆಗೆ ಅರ್ಹರಿರುವ ಕುಟುಂಬಗಳಿಗೆ ತಾತ್ಕಾಲಿಕ ಪಡಿತರ ಕೂಪನ್‌ಗಳನ್ನು ಮುದ್ರಿಸಿ ನೀಡಲು ಜಿಲ್ಲೆಗಳಿಗೆ ಅದೇಶಿಸಿದೆ, ಹೊಸದಾಗಿ ಪಡಿತರ ಚೀಟಿ ಕೋರಿ ಬಂದ ಅಹವಾಲುಗಳನ್ನು ಮರು ಪರಿಶೀಲಿಸಲು ತಿಳಿಸಿದೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	**1286(1773)**
ಸದಸ್ಯರ ಹೆಸರು	**ಶ್ರೀ ಪ್ರಭಾಕರ ಬಂಗೇರ ಕೆ (ಬೆಳ್ತಂಗಡಿ)**
ಉತ್ತರಿಸಬೇಕಾದ ಸಚಿವರು	**ಶ್ರೀ ಜಿ ಟಿ ದೇವೇಗೌಡ (ಸಹಕಾರ ಸಚಿವರು)**

ಅ) ಸಹಕಾರ ಸಂಘಗಳ ಮೂಲಕ ಸದಸ್ಯರಿಗೆ ಯಶಸ್ವಿನಿ ಯೋಜನೆಯ ಮೂಲಕ ಈವರೆಗೆ ಆರೋಗ್ಯ ಸೌಲಭ್ಯವನ್ನು ನೀಡಲಾಗಿರುವ ಫಲಾನುಭವಿಗಳೆಷ್ಟು?

ಯಶಸ್ವಿನಿ ಯೋಜನೆಯಲ್ಲಿ ಈವರೆಗೆ 392250 ಫಲಾನುಭವಿಗಳು ಸೌಲಭ್ಯವನ್ನು ಪಡೆದಿದ್ದು ಈ ಪೈಕಿ 319880 ಫಲಾನುಭವಿಗಳು ಉಚಿತ ಹೊರರೋಗ ಚಿಕಿತ್ಸೆಯ ಸೌಲಭ್ಯವನ್ನು ಮತ್ತು 72370 ಫಲಾನುಭವಿಗಳು ನಗದು ರಹಿತ ಶಸ್ತ್ರಚಿಕಿತ್ಸೆಯ ಸೌಲಭ್ಯವನ್ನು ಪಡೆದಿರುತ್ತಾರೆ

ಆ) ಯಶಸ್ವಿನಿ ಯೋಜನೆಯ ಜೊತೆಗೆ ಸಹಕಾರ ಸಂಘಗಳ ಸದಸ್ಯರಿಗೆ ಒದಗಿಸಿಕೊಡುತ್ತಿರುವ ಪ್ರಮುಖ ಸೌಲಭ್ಯಗಳೇನು?

ಯಶಸ್ವಿನಿ ಸಹಕಾರಿ ರೈತರ ಆರೋಗ್ಯ ರಕ್ಷಣಾ ಟ್ರಸ್ಟು ಗುರುತಿಸಿದ ಆಸ್ಪತ್ರೆಗಳು ಯಶಸ್ವಿನಿ ಫಲಾನುಭವಿಗಳಿಗೆ ಈ ಕೆಳಗೆ ನಮೂದಿಸಿದ ಸೌಲಭ್ಯಗಳನ್ನು ಒದಗಿಸುತ್ತವೆ

1) ಉಚಿತ ಹೊರರೋಗ ಚಿಕಿತ್ಸೆ
2) ರಿಯಾಯಿತಿ ದರದಲ್ಲಿ ಆರೋಗ್ಯ ತಪಾಸಣೆ
3) ನಗದು ರಹಿತ (ಒಂದೇ ವರ್ಷದಲ್ಲಿ ಒಂದೆ ಶಸ್ತ್ರಚಿಕಿತ್ಸೆಯಾದಲ್ಲಿ ಗರಿಷ್ಠ ರೂ 1 00 ಲಕ್ಷದವರೆಗೆ ಒಂದಕ್ಕಿಂತ ಹೆಚ್ಚು ಶಸ್ತ್ರಚಿಕಿತ್ಸೆಯಾದಲ್ಲಿ ಗರಿಷ್ಟ ರೂ 2 00 ಲಕ್ಷದವರೆಗೆ) ಗುರುತಿಸಿದ 1600 ಶಸ್ತ್ರಚಿಕಿತ್ಸೆಗಳು
4) ತುರ್ತು ವೈದ್ಯಕೀಯ ಚಿಕಿತ್ಸೆ
5) ನವಜಾತ ಶಿಶುವಿನ ರಕ್ಷಣೆ